**1 ನೇ ಹೆಚ್ಚುವರಿ ಸಿವಿಲ್  ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ,**
**ಟಿ.ನರಸೀಪುರ**

**ದಿನಾಂಕ 20 ನೇ ಡಿಸೆಂಬರ್ 2025**

**ಸಿಸಿ ಸಂಖ್ಯೆ: 1938/2025**

ಫಿರ್ಯಾದಿಃ : ರಾಜ್ಯದ ಪರವಾಗಿ  ತಲಕಾಡು ಪೊಲೀಸ್ ಠಾಣೆ

ವಿರುದ್ಧ

ಆರೋಪಿಗಳು : 1. ದಿಲೀಪ ಃಉಃ ದಿಲೀಪ್ ಕುಮಾರ್.ಆರ್
ಬಿನ್ ಲೇಟ್ ರಾಜು, 29 ವರ್ಷ.

2. ಸಾಕಮ್ಮ ಕೋಂ ಲೇಟ್ ರಾಜು,
ವಯಸ್ಸು 49 ವರ್ಷ.

ಇಬ್ಬರ ವಾಸಃ ಕಲಿಯೂರು ಗ್ರಾಮ, ತಲಕಾಡು ಹೋಬಳಿ,
ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

**ದೋಷಾರೋಪಣೆ**

ಶ್ರೀಮತಿ ಎನ್.ನಿವೇದಿತಾ, 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಣೆಯನ್ನು ಮಾಡುತ್ತೇನೆ.

ಮೊದಲನೆಯದಾಗಿ ದಿನಾಂಕಃ 11/07/2025 ರಂದು ಬೆಳಿಗ್ಗೆ 10.25 ಗಂಟೆ ಸಮಯದಲ್ಲಿ, ತಲಕಾಡು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ಟಿ.ನರಸೀಪುರ ತಾಲ್ಲೂಕು, ಕಲಿಯೂರು ಗ್ರಾಮದಲ್ಲಿ,ಚಾಸಾ.1 ರವರ ಮನೆಯ ಮುಂದೆ, 1 ನೇ ಆರೋಪಿಯು ಅದೇ ಗ್ರಾಮದ ಕೋಮಲ ಮತ್ತು ನಿಂಗಯ್ಯ ರವರ ಮೇಲೆ ತಲಕಾಡು ಪೋಲೀಸ್ ಠಾಣೆಯಲ್ಲಿ ಜಾಗದ ವಿಚಾರವಾಗಿ ದೂರನ್ನು ನೀಡಿದ್ದು, ಈ ವಿಚಾರದಲ್ಲಿ ಚಾಸಾ.1 ರವರ ಮೇಲೆ ಜಾಗದ ವಿಚಾರದಲ್ಲಿ ಏಕೆ ನೀನು ಬಂದಿದ್ದಯಾ ಎಂದು ಮಚ್ಚನ್ನು ಹಿಡಿದುಕೊಂಡು ಗಲಾಟೆ ಮಾಡಿದ್ದು,

ನಂತರ ಚಾಸಾ.3 ರವರು ಸದರೀ ಮಚ್ಚನ್ನು ಕಿತ್ತುಕೊಂಡು ಬಿಸಾಕಿದ್ದು, ಆಗ ಮಾತಿಗೆ ಮಾತು ಬೆಳೆದು 1 ನೇ ಆರೋಪಿಯು ಚಾಸಾ.1 ರವರನ್ನು ಕೆಳಕ್ಕೆ ಕೆಡವಿಕೊಂಡು ಕೈ ಬೆರಳುಗಳಿಂದ ಕಣ್ಣಿಗೆ ಹೊಡೆದು, ಬಾಯಿಯಿಂದ ಬಲಕೆನ್ನೆಗೆ, ಬಲಭುಜ, ಎದೆಯ ಭಾಗಕ್ಕೆ ಕಚ್ಚಿ ಸಾಮಾನ್ಯ ಸ್ವರೂಪರದ ನೋವುಂಟು ಮಾಡಿದ್ದು, ಆ ಮೂಲಕ ಆರೋಪಿಯಾ ಭಾರತೀಯ ನ್ಯಾಯ ಸಂಹಿತೆ ಕಲಂ.**115(2)** ಸಹಕಲಂ 190 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, ಮೇಲ್ಕಂಡ ಆರೋಪಿಗಳಾದ ನೀವು, ಚಾಸಾ.1 ರವರೊಂದಿಗೆ ಗಲಾಟೆ ಮಾಡುತ್ತಿದ್ದು ಅದನ್ನು ಚಾಸಾ.5 ರವರು ಕೇಳಲು ಹೋದಾಗ, 1 ನೇ ಆರೋಪಿಯು ಚಾಸಾ.5 ರವರನ್ನು ತಬ್ಬಿ ಹಿಡಿದುಕೊಂಡು ಮೆಟ್ರೆ ಹತ್ತಿರ ಹಿಡಿದುಕೊಂಡಾಗ, ಚಾಸಾ.2 ರವರು ಏಕೆ ನಮ್ಮ ತಂದೆಯನ್ನು ಹಿಡಿದುಕೊಂಡಿದ್ದೀಯಾ ಎಂದು ಕೇಳಲು ಹೋದಾಗ, 1 ನೇ ಆರೋಪಿಯು ತನ್ನ ಕೈಯಲ್ಲಿದ್ದ ಚಾಕುವಿನಿಂದ ಚಾಸಾ.2 ರವರ ಬಲಭಾಗದ ಕಿವಿಗೆ, ಎಡಕೈಗೆ, ಬಲಗಣ್ಣಿನ ಕಳಭಾಗಕ್ಕೆ ಚಾಕುವಿನಿಂದ ಗೀರಿ ಗಾಯಪಡಿಸಿದ್ದು, ನಂತರ ಚಾಸಾ.6 ರವರು ಏಕೆ ನನ್ನ ಗಂಡನನ್ನು ಹೊಡೆಯುತ್ತಿದ್ದೀಯಾ ಎಂದು ಕೇಳಲು ಹೋದಾಗ, 1 ನೇ ಆರೋಪಿಯು ಚಾಸಾ.6 ರವರ ಕಾಲುಗಳನ್ನು ಹಿಡಿದು ಕೆಳಕ್ಕೆ ಬೀಳಿಸಿದ್ದು ಚಾಸಾ.6 ರವರು ಎದ್ದೇಳಲು ಪ್ರಯತ್ನಿಸಿದಾಗ 1 ನೇ ಆರೋಪಿಯು ಚಾಸಾ.6 ರವರ ಬಲಗಾಲಿಗೆ ಬೀಸಿದ ಪರಿಣಾಮ, ಚಾಸಾ.6 ರವರ ಬಲಗಾಲಿಗೆ ಚಾಕು ತಗುಲಿ ಗೀರಿದ ಗಾಯವಾಗಿದ್ದು, ನಂತರ ಚಾಸಾ.1 ರವರು 1 ನೇ ಆರೋಪಿಯನ್ನು ಹಿಡಿದುಕೊಳ್ಳಲು ಹೋದಾಗ, ಚಾಸಾ.1 ರವರಿಗೆ ಚಾಕುವಿನಿಂದ ಮೂಗು, ಬಲಗೈ, ಎಡಹಣೆಗೆ ಹೊಡೆದು ತೀವ್ರ ಸ್ವರೂಪರದ ನೋವುಂಟು ಮಾಡಿದ್ದು, ಆ ಮೂಲಕ ಆರೋಪಿಯಾ ಭಾರತೀಯ ನ್ಯಾಯ ಸಂಹಿತೆ ಕಲಂ **118(1) ಸಹಕಲಂ 3(5)** ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, 1 ನೇ ಆರೋಪಿಯಾದ ನೀವು, ಚಾಸಾ.1 ರವರೊಂದಿಗೆ ಗಲಾಟೆ ಮಾಡುತ್ತಿದ್ದು ಅದನ್ನು ಚಾಸಾ.5 ರವರು ಕೇಳಲು ಹೋದಾಗ, 1 ನೇ ಆರೋಪಿಯು ಚಾಸಾ.5 ರವರನ್ನು ತಬ್ಬಿ ಹಿಡಿದುಕೊಂಡು ಅಕ್ರಮ ತಡೆ ಉಂಟು ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾರತೀಯ ನ್ಯಾಯ

ಸಂಹಿತೆ ಕಲಂ.126(2) **ಸಹಕಲಂ** 3(5) ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, 2 ನೇ ಆರೋಪಿಯಾದ ನೀವು, 1 ನೇ ಆರೋಪಿಗೆ ಚಾಸಾ.1, 2, 4, 5 ಮತ್ತು 6 ರವರೊಂದಿಗೆ ಜಗಳವಾಡಲು ಕುಮ್ಮಕ್ಕು ನೀಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.**54** **ಸಹಕಲಂ** 3(5) ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ.

ಪ್ರಶ್ನೆಃ ಈಗ ಓದಿ ಹೇಳಿದ ದೋಷಾರೋಪಣೆಯನ್ನು ಅರ್ಥಮಾಡಿಕೊಂಡಿರುವಿರಾ?

ಉತ್ತರಃ1 ನೇ ಆರೋಪಿಃ

ಉತ್ತರಃ2 ನೇ ಆರೋಪಿಃ

ಪ್ರಶ್ನೆಃ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯಾಗಬೇಕಾ?

ಉತ್ತರಃ1 ನೇ ಆರೋಪಿಃ

ಉತ್ತರಃ2 ನೇ ಆರೋಪಿಃ

(ಈ ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿದ ನಂತರ ಅವರು ನೀಡಿದ ಉತ್ತರವನ್ನು ನಾನು ನನ್ನ ಸ್ವಂತ ಬರಹದಲ್ಲಿ ದಾಖಲು ಮಾಡಿರುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ)

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ. ದ. ನ್ಯಾ ದಂ., ಟಿ.ನರಸೀಪುರ.**